ಕರ್ನಾಟಕ ಸರ್ಕಾರ

ಸಾರ್ವಜನಿಕ ಶಿಕ್ಷಣ ಇಲಾಖೆಯ ಆಯುಕ್ತರ ಕಛೇರಿ, ನೃಪತುಂಗ ರಸ್ತೆ, ಬೆಂಗಳೂರು.

ಸಂಖ್ಯೆ:ಸಿ8[5]ಶಾ.ಶಿ.ಅ:ಹೆ.ಶಿ.ಸ್ಥ/06/2015-16 ದಿನಾಂಕ: 13.07.2015

: ಸು ತ್ತೋ ಲೆ :

**ವಿಷಯ:** ಖಾಸಗಿ ಅನುದಾನಿತ ಪ್ರೌಢಶಾಲೆಗಳಲ್ಲಿನ ಹೆಚ್ಚುವರಿ ಶಿಕ್ಷಕರುಗಳನ್ನು ಗುರುತಿಸಿ, ಕಾರ್ಯಭಾರವಿರುವ ಪ್ರೌಢಶಾಲೆಗಳಿಗೆ ಮರುಹೊಂದಾಣಿಕೆ ಮಾಡುವ ಕುರಿತು.

**ಉಲ್ಲೇಖ:** 1] ಸರ್ಕಾರದ ಸುತ್ತೋಲೆ ಸಂಖ್ಯೆ:ಇಡಿ:137:ಎಸ್‌ಇಪಿ:2000, ದಿ:23.01.2002.
2] ಸರ್ಕಾರದ ಆದೇಶ ಸಂಖ್ಯೆ:ಇಡಿ:69:ಎಸ್‌ಓಹೆಚ್:2011, ದಿ:31.03.2011.
3] ಈ ಕಛೇರಿಯ ಸುತ್ತೋಲೆ ಸಂಖ್ಯೆ:ಸಿ8[1]ವರ್ಗ:ಅನು:26:2011-12, ದಿನಾಂಕ: 16.04.2015 ಮತ್ತು 19.06.2015

ಖಾಸಗಿ ಅನುದಾನಿತ ಪ್ರೌಢಶಾಲೆಗಳಲ್ಲಿನ ಶಿಕ್ಷಕರುಗಳನ್ನು ಉಲ್ಲೇಖ [1]ರ ಸರ್ಕಾರದ ಆದೇಶದಲ್ಲಿ ತಿಳಿಸಿರುವಂತೆ, ಹಾಜರಾತಿ ಇಲ್ಲದ ಕಾರಣ ನಿಗದಿತ ಕಾರ್ಯಭಾರವಿಲ್ಲದ ಶಿಕ್ಷಕರನ್ನು ಹೆಚ್ಚುವರಿ ಎಂದು ಗುರುತಿಸಿ, ಕಾರ್ಯಭಾರವಿರುವ ಶಾಲೆಗಳಿಗೆ ವರ್ಗಾವಣೆ ಮಾಡಲು ಉಲ್ಲೇಖ [1]ರ ಸುತ್ತೋಲೆಯಂತೆ ಕ್ರಮವಹಿಸಲು ಉಲ್ಲೇಖ [2]ರಲ್ಲಿ ಆದೇಶಿಸಲಾಗಿದೆ. ಉಲ್ಲೇಖ [3]ರ ಈ ಕಛೇರಿಯ ಪತ್ರದಲ್ಲಿ ಹೆಚ್ಚುವರಿ ಶಿಕ್ಷಕರನ್ನು ತಮ್ಮ ಆಡಳಿತ ಮಂಡಳಿಯ ವ್ಯಾಪ್ತಿಯ ಶಾಲೆಗಳಿಗೆ ವರ್ಗಾಯಿಸುವಂತೆ ಮತ್ತು ವರ್ಗಾಯಿಸಲಾಗದ ಶಿಕ್ಷಕರ ವಿವರವನ್ನು ಸಂಬಂಧಿಸಿದ ಉಪನಿರ್ದೇಶಕರುಗಳಿಗೆ ಕಳುಹಿಸುವಂತೆ ಸೂಚಿಸಲಾಗಿದೆ. ಈ ಆಧಾರದ ಮೇಲೆ 2015-16ನೇ ಸಾಲಿನ ಹೆಚ್ಚುವರಿ ಶಿಕ್ಷಕರ ಸ್ಥಳಾಂತರ ಪ್ರಕ್ರಿಯೆಗೆ ಸಂಬಂಧಿಸಿದಂತೆ ಈ ಕೆಳಕಂಡ ಮಾರ್ಗಸೂಚಿಯನ್ನು ಹೊರಡಿಸಲಾಗಿದೆ.

## 01. ಪ್ರಥಮ ಹಂತ:

### I. ಆಡಳಿತ ಮಂಡಳಿಯಿಂದ ವಹಿಸಬೇಕಾದ ಕ್ರಮ:-

ಆಡಳಿತ ಮಂಡಳಿಯ ವತಿಯಿಂದ ಹಲವಾರು ಪ್ರೌಢಶಾಲೆಗಳು ನಡೆಯುತ್ತಿದ್ದು, ಅವುಗಳಲ್ಲಿ ನಿಗದಿತ ಕಾರ್ಯಭಾರವಿಲ್ಲದ ಶಾಲೆಗಳಲ್ಲಿನ ಹೆಚ್ಚುವರಿ ಶಿಕ್ಷಕರುಗಳನ್ನು ಅವರದೇ ಆಡಳಿತ ಮಂಡಳಿಯ ವತಿಯಿಂದ ನಡೆಯುತ್ತಿರುವ ಇತರೆ ಕಾರ್ಯಭಾರವಿರುವ ಶಾಲೆಗಳಲ್ಲಿನ ಖಾಲಿ ಹುದ್ದೆಗಳಿಗೆ ವರ್ಗಾವಣೆ ಮೂಲಕ ಮರು ಹೊಂದಾಣಿಕೆ ಮಾಡಿಕೊಳ್ಳಲು ಮತ್ತು ಇಂತಹ ಅಗತ್ಯವಿರುವ ಖಾಲಿ ಹುದ್ದೆಗಳಿಗೆ ಹೆಚ್ಚುವರಿ ಶಿಕ್ಷಕರನ್ನು ಹುದ್ದೆ ಸಹಿತ ಸ್ಥಳಾಂತರಿಸಿಕೊಳ್ಳಲು ಅವಕಾಶ ಕಲ್ಪಿಸಿದೆ. ಈ ರೀತಿ ವರ್ಗಾವಣೆ/ಸ್ಥಳಾಂತರ ಮಾಡುವಾಗ ಆಡಳಿತ ಮಂಡಳಿಯವರು ಸಿಬ್ಬಂದಿ ಮಾದರಿ ಪ್ರಕಾರ ಹುದ್ದೆ ಮಂಜೂರಾತಿಯಾಗಿ ಅನುದಾನಕ್ಕೊಳಪಟ್ಟಿರುವ ಹುದ್ದೆಗಳು ಪ್ರಸ್ತುತ ಸಾಲಿನ ಮಾನ್ಯತೆ ನವೀಕರಣದಲ್ಲಿ ಉಲ್ಲೇಖಿಸಿರುವ ವಿಭಾಗಗಳ ಸಂಖ್ಯೆಗೆ ದಿನಾಂಕ: **30.06.2015**ರ ಅಂತ್ಯಕ್ಕೆ ಸರಾಸರಿ ಹಾಜರಾತಿ, ವಿಷಯ ಹೊಂದಾಣಿಕೆಗೆ ಅನುಗುಣವಾಗಿ ಖಾಲಿ ಇರುವ ಹುದ್ದೆಗಳಿಗೆ ವರ್ಗಾವಣೆ/ಸ್ಥಳಾಂತರ ಮಾಡಿಕೊಳ್ಳತಕ್ಕದ್ದು. ಈ ಪ್ರಕ್ರಿಯನ್ನು ಮುಗಿಸಿ, ಆಡಳಿತ ಮಂಡಳಿಯವರು ಅನುಮೋದನೆಗಾಗಿ ಅವರ ಸ್ಪಷ್ಟ ವರದಿಯೊಂದಿಗೆ ಪ್ರಸ್ತಾವನೆಯನ್ನು ಸಲ್ಲಿಸಬೇಕು.

### II. ಕ್ಷೇತ್ರ ಶಿಕ್ಷಣಾಧಿಕಾರಿಗಳ ಹಂತದಲ್ಲಿ ವಹಿಸಬೇಕಾದ ಕ್ರಮ:-

ಈ ರೀತಿ ಆಡಳಿತ ಮಂಡಳಿಯವರು ಸಲ್ಲಿಸಿರುವ ಪ್ರಸ್ತಾವನೆಗಳನ್ನು ಮೇಲೆ ತಿಳಿಸಿರುವಂತೆ ಎಲ್ಲಾ ಮಾಹಿತಿಗಳನ್ನು ಪೂರೈಸಿರುವ ಬಗ್ಗೆ ಸ್ವತಃ ಖಚಿತ ಪಡಿಸಿಕೊಂಡು ಎಲ್ಲಾ ದಾಖಲೆಗಳನ್ನು ದೃಢೀಕರಿಸಿ, ಈ ಕಛೇರಿಗೆ ಉಪನಿರ್ದೇಶಕರ ಮೂಲಕ ಅನುಮೋದನೆಗಾಗಿ ಪ್ರಸ್ತಾವನೆಯನ್ನು ಸಲ್ಲಿಸಬೇಕು. ಒಂದು ವೇಳೆ ಮಾಹಿತಿಗಳನ್ನು ಪರಿಶೀಲಿಸದೇ ಈ ಕಛೇರಿಗೆ ಸಲ್ಲಿಸಿ ತಿರಸ್ಕೃತಗೊಂಡಲ್ಲಿ ಅದರ ಸಂಪೂರ್ಣ ಜವಾಬ್ದಾರಿ ಕ್ಷೇತ್ರ ಶಿಕ್ಷಣಾದಿಕಾರಿಗಳೇ ಆಗಿರುತ್ತಾರೆ. ಆದ್ದರಿಂದ ಆಡಳಿತ ಮಂಡಳಿ ಸಲ್ಲಿಸಿರುವ ಪ್ರಸ್ತಾವನೆಯನ್ನು ಕೂಲಂಕಷವಾಗಿ ಪರಿಶೀಲನೆ ಮಾಡಿ ಈ ಕಛೇರಿಗೆ ಸಲ್ಲಿಸಲು ತಿಳಿಸಿದೆ. ಈ ಪ್ರಕಿಯೆನಂತರ ಮೇಲೆ ತಿಳಿಸಿದಂತೆ ದಿನಾಂಕ: 30.06.2015ರ ಅಂತ್ಯಕ್ಕೆ ಶಾಲಾ ಮಕ್ಕಳ ಸರಾಸರಿ ಹಾಜರಾತಿಯನ್ನು ಪರಿಗಣಿಸಿ ಉಳಿದಿರುವ ವಿಷಯವಾರು ಹೆಚ್ಚುವರಿ ಶಿಕ್ಷಕ/ಹುದ್ದೆಗಳನ್ನು ಗುರುತಿಸುವುದು. ಈ ರೀತಿ ಗುರುತಿಸಲ್ಪಟ್ಟ ಹೆಚ್ಚುವರಿ ಶಿಕ್ಷಕ/ಹುದ್ದೆಗಳ ವಿವರಗಳನ್ನು ಕ್ರೋಢೀಕರಿಸಿ, ಶಾಲಾವಾರು ಮತ್ತು ವಿಷಯವಾರು ತಃಖ್ತೆಯನ್ನು ಸಂಬಂಧಪಟ್ಟ ಜಿಲ್ಲಾ ಉಪನಿರ್ದೇಶಕರಿಗೆ ಸಲ್ಲಿಸುವುದು.